ಆ) ಉದ್ದೇಶಿತ ಕಾರ್ಖಾನೆಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪೂರ್ವಾನುಮತಿಗಾಗಿ ಅರ್ಜಿ ಸಲ್ಲಿಸಿದ್ದು, ಪರಿಸರ ಆಘಾತ ಅಧ್ಯಯನ ವರದಿಯನ್ನು ಸಲ್ಲಿಸಿದ್ದು, ಅರ್ಜಿಯು ಮಂಡಳಿಯ ಪರಿಶೀಲನೆಯಲ್ಲಿದ್ದು, ಇನ್ನಷ್ಟು ತಾಂತ್ರಿಕ ವಿಷಯಗಳನ್ನು ಮಂಡಳಿಗೆ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಕಾರ್ಖಾನೆಯು ಪ್ರಾರಂಭವಾಗುವ ಮೊದಲು ಎಲ್ಲಾ ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸುವಂತೆ ಸೂಚಿಸಲಾಗುವುದು.

ಶ್ರೀ ವಿಜಯಕುಮಾರ್ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಬಿಎಸ್‌ಎಫ್ ಕಾರ್ಖಾನೆ ಬಂದಿರುವುದರಿಂದ ಜನರು ಬಹಳ ಭಯಗ್ರಸ್ತರಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಇವರು ಪ್ರಯತ್ನ ಮಾಡಿ ಅಲ್ಲೆಲ್ಲೂ ಆಗದೆ ಕೊನೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಈ ಕಾರ್ಖಾನೆ ತಂದಿದ್ದಾರೆ. ಇದರಿಂದಾಗಿ ಸುಮಾರು ೨೧ ಕಿ.ಮೀ ವ್ಯಾಪ್ತಿಯಲ್ಲಿ ಈ ಚರ್ಮವನ್ನು ಹದ ಮಾಡುವಂತಹ ಕಾರ್ಖಾನೆ ಕಾಣುತ್ತದೆ. ಆಕ್ಟಿಯಲ್ ಆಗಿ ಅವರು ಏನು ಮಾಡುವುದಕ್ಕೆ ಹೋಗುತ್ತಾರೆ ಎಂಬುದನ್ನು ಇದುವರೆಗೆ ತಿಳಿಯುಪಡಿಸಿಲ್ಲ. ಈ ಚರ್ಮ ಹದ ಮಾಡಿದ ದೊಡ್ಡ ಪ್ರಮಾಣದ ಗಲೀಜಾದ ನೀರನ್ನು ಸಮುದ್ರಕ್ಕೆ ಬಿಟ್ಟರೆ ಸಮುದ್ರದಲ್ಲಿರುವ ಮೀನು ಹಾಳಾಗುತ್ತವೆ. ಒಟ್ಟಿಗೆ ೨೧ ಕಿ.ಮೀ ವ್ಯಾಪ್ತಿಯಲ್ಲಿ ಪಲ್ಯೂಷನ್ ಆಗಿ ಭಯಂಕರ ವಾಸನೆ ಆಗುವಂತಹ ಪರಿಸ್ಥಿತಿ ಇದೆ. ಇಲ್ಲಿ ಬೆಂಗಳೂರಿನಲ್ಲಿ ಸಹಿತ ಟ್ಯಾನರಿ ರಸ್ತೆ ಅಂತ ಇದೆ. ಆದು ತಮಗೆ ಗೊತ್ತಿರಬಹುದು. ಆದುದರಿಂದ ಅದಕ್ಕೆ ಪರ್ಮಿಷನ್ ಕೊಡದೆ ಇರುವುದು ಉತ್ತಮ ಅಂತ ಕಾಣುತ್ತದೆ.

ಶ್ರೀ ಎನ್. ಜಿ. ಹಾಲಪ್ಪ.—ಸನ್ಮಾನ್ಯ ಅಧ್ಯಕ್ಷರೇ. ಈ ಕಾರ್ಖಾನೆ ಇನ್ನೂ ಪ್ರಾರಂಭವಾಗಿಲ್ಲ. ಅವರು ಸೈಟ್ ಕೊಟ್ಟಿದ್ದಾರೆ. ಅವರು ಘಟಕ ಸ್ಥಾಪಿಸುವುದಕ್ಕೆ ಜಾಗ ಕೊಟ್ಟಿದ್ದಾರೆ. ಕಾರ್ಖಾನೆ ಇನ್ನೂ ಪ್ರಾರಂಭವಾಗಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ.—ಸನ್ಮಾನ್ಯ ಅಧ್ಯಕ್ಷರೆ ಅವರು ಫೌಂಡೇಷನ್ ಈಗಾಗಲೇ ಮಾಡಿದ್ದಾರೆ. ಎರಡು ನೂರು ಎಕರೆ ಜಮೀನು ಕೆಎಟಿಬಿ ಅವರಿಗೆ ಈಗಾಗಲೇ ಕೊಡಲಾಗಿದೆ. ಪ್ರಯೋಗ ಪಶುವಂತೆ ಆ ಸ್ಥಳವನ್ನು ಉಪಯೋಗಿಸುತ್ತಿದ್ದಾರೆ.

ಶ್ರೀ ಎನ್. ಜಿ. ಹಾಲಪ್ಪ.—ಅಲ್ಲಿ ಅವರು ಪಲ್ಯೂಷನ್ ಕಂಟ್ರೋಲ್ ಬೋರ್ಡಿಗೆ ಅರ್ಜಿ ಮಾಡಿದ್ದಾರೆ. ಆ ಅರ್ಜಿ ಪರಿಶೀಲನೆಯಲ್ಲಿದೆ. ಅವರನ್ನು ಕರೆದು ಮಾತನಾಡಿದ್ದೇವೆ. ಇನ್ನೂ ಕೆಲವು ತಾಂತ್ರಿಕ ಮಾಹಿತಿಗಳನ್ನು ಕೊಡಿ ಅಂತ ಹೇಳಿ ಕೇಳಿದ್ದೇವೆ. ದಿನಾಂಕ ೩-೩-೯೪ರಂದು ಒಂದು ಮೀಟಿಂಗ್ ಆಗಿದೆ. ಅವರು ಏನು ಹೇಳುತ್ತಾರೆ ಎಂದು ಕೇಳಿ ನಮ್ಮ ಪಲ್ಯೂಷನ್ ಕಂಟ್ರೋಲ್ ಆಕ್ಟ್‌ಪ್ಪ ಒಳಗೆ ಬರುವುದಾದರೆ ಪುನಃ ಅದನ್ನು ಪರಿಶೀಲಿಸುವುದಕ್ಕೆ ಪರಿಶೀಲನಾ ಕಮಿಟಿ ಅಂತ ಇದೆ, ಆ ಕಮಿಟಿ ಮುಂದೆ ಹೋಗಿ ಇವರಿಗೂ ಕರೆದು ಮಾತನಾಡಿ ನಮ್ಮ ಪಲ್ಯೂಷನ್ ಕಂಟ್ರೋಲ್ ನಿಯಮ ಏನು ಇದೆಯೋ ಇದನ್ನು ಅವರೇ ಪಾಲನೆ ಮಾಡುವುದಾದರೆ ಹಾಗೂ ಪಲ್ಯೂಷನ್ ಆಗದೆ ಇರುವುದಾದರೆ ಆದನ್ನು ಪ್ರಾರಂಭಿಸಲು ಅನುಮತಿ ನೀಡಲಾಗುವುದು.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರಗಳ ಅವಧಿ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ರಾಜ್ಯದಲ್ಲಿ ಟ್ರಾಕ್ಟರುಗಳ ನೋಂದಣಿ

೨೫೮೮ (೬೬೭) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಒಟ್ಟಾರೆ ಟ್ರಾಕ್ಟರ್‌ಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಒಕ್ಕಲುತನಕ್ಕೆ ಸಂಬಂಧಪಟ್ಟ ಟ್ರಾಕ್ಟರ್‌ಗಳ ಸಂಖ್ಯೆ ಎಷ್ಟು ?

ಇ) ಟ್ರಾಕ್ಟರ್‌ಗಳ ನೋಂದಣಿ ಮತ್ತು ತೆರಿಗೆ ತುಂಬುವ ಸಂದರ್ಭಗಳಲ್ಲಿ ರೈತರಿಗೆ ಆಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರದ ವಿಶೇಷ ಕಾರ್ಯಕ್ರಮವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು).—

ಅ) ೧. ಟ್ರಾಕ್ಟರ್‌ಗಳ ಸಂಖ್ಯೆ : ೫೬,೨೦೨
೨. ಟ್ರಾಕ್ಟರ್–ಟ್ರೇಲರ್‌ಗಳ ಸಂಖ್ಯೆ : ೫೮,೫೪೧

ಆ) ೧. ಟ್ರಾಕ್ಟರ್‌ಗಳ ಸಂಖ್ಯೆ : ೨೦,೪೬೭
೨. ಟ್ರಾಕ್ಟರ್–ಟ್ರೇಲರ್‌ಗಳ ಸಂಖ್ಯೆ : ೫೧,೦೯೧

ಇ) ಟ್ರಾಕ್ಟರ್ ಟ್ರೇಲರ್‌ಗಳ ನೋಂದಣಿ ಮಾಡುವಲ್ಲಿ ತಿಳಿಸಿರುವಂತೆ ಯಾವುದೇ ಸಮಸ್ಯೆಯಿರುವುದಿಲ್ಲ. ಅರ್ಜಿಗಳನ್ನು ಸರಿಯಾದ ಕ್ರಮದಲ್ಲಿ ಭರ್ತಿ ಮಾಡಿ ನಿಗದಿಪಡಿಸಿದ ಶುಲ್ಕ ಮತ್ತು ತೆರಿಗೆ ಪಾವತಿ ಮಾಡಿದಲ್ಲಿ ತ್ವರಿತವಾಗಿ ವಾಹನದ ನೋಂದಣಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಟ್ರಾಕ್ಟರ್ ಟ್ರೇಲರ್‌ಗಳ ನೋಂದಣಿ ಸೇರಿದಂತೆ ಇತರೆ ಎಲ್ಲ ಕೆಲಸ ಕಾರ್ಯಗಳಿಗೆ ಪದೇ ಪದೇ ಕಛೇರಿಗೆ ಬರುವುದನ್ನು ತಪ್ಪಿಸಲು ಟ್ರಾಕ್ಟರ್ ಟ್ರೇಲರ್ ಮತ್ತು ಇತರೆ ವಾಹನಗಳ ಮಾಲೀಕರು ಹಾಗೂ ಸಾರ್ವಜನಿಕರಿಗೆ ಮಾರ್ಗದರ್ಶನ ನೀಡಲು ಪ್ರತಿಯೊಂದು ಕಛೇರಿಯಲೂ ವ್ಯವಸ್ಥೆ ಮಾಡಲಾಗಿದೆ. ವ್ಯವಸಾಯಕ್ಕಾಗಿ ಬಳಸುವ ಟ್ರಾಕ್ಟರ್ ಟ್ರೇಲರ್‌ಗಳಿಗೆ ತೆರಿಗೆ ಪಾವತಿ ಮಾಡಲು ಅನುವಾಗುವಂತೆ ಜೀವಾವಧಿ ತೆರಿಗೆಯನ್ನು ವಿಧಿಸಲಾಗುತ್ತದೆ. ಇತ್ತೀಚೆಗೆ ಕೃಷಿ ಬಳಕೆಯ ಟ್ರಾಕ್ಟರ್–ಟ್ರೇಲರ್‌ಗಳನ್ನು ಸಾರಿಗೇತರ ವಾಹನಗಳೆಂದು ವ್ಯಾಖ್ಯಾನಿಸಿದ್ದು, ಅದರಂತೆ ಇಲಾಖೆಯ ಅಧೀನ ಕಛೇರಿಗಳಿಗೆ ಸುತ್ತೋಲೆಯನ್ನು ಹೊರಡಿಸಿ ಸೂಕ್ತ ಕ್ರಮವನ್ನು ಜರುಗಿಸುವಂತೆ ತಿಳಿಸಲಾಗಿದೆ.

I & II ದರ್ಜೆ ಹುದ್ದೆಗಳಿಗೆ ನೇರ ನೇಮಕಾತಿ

೨೬೧ (ಅಗಿ) ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಪ್ರತಿಭಾವಂತ ಪದವೀಧರರಿಗೆ ದರ್ಜೆ ಒಂದು ಮತ್ತು ಎರಡುಗಳಿಗೆ ನೇರ ನೇಮಕಾತಿ ಆದೇಶ ಯಾವಾಗ ಹೊರಡಿಸಲಾಯಿತು ?

ಆ) ಇದುವರೆಗೆ ಯಾವ ಯಾವ ವರ್ಷಗಳಲ್ಲಿ ಎಷ್ಟು ಜನಕ್ಕೆ ದರ್ಜೆ ಒಂದು ಮತ್ತು ಎರಡು ಹುದ್ದೆಗಳಿಗೆ ನೇರ ನೇಮಕಾತಿ ಮಾಡಲಾಗಿದೆ ?

ಇ) ನೇರ ನೇಮಕಾತಿಯಾದ ಅಭ್ಯರ್ಥಿಗಳೆಲ್ಲರೂ ಸರಕಾರಿ ಸೇವೆಗೆ ಸೇರಿದ್ದಾರೆಯೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—

ಅ) ದಿನಾಂಕ ೧೧–೪–೧೯೮೫ ರಂದು ಸಿಯಮಗಳನ್ನು ಜಾರಿಗೆ ತರಲಾಯಿತು.

ಆ)

೧೯೮೨–೮೩		೧೯೮೩–೮೪	
ದರ್ಜೆ–೧	ದರ್ಜೆ–೨	ದರ್ಜೆ–೧	ದರ್ಜೆ–೨
೧೫	೨೯	೧	೬

ಇ) ೧೯೮೨–೮೩ನೇ ಸಾಲಿನವರು ನೇಮಕ ಗೊಂಡಿರುತ್ತಾರೆ.
೧೯೮೩–೮೪ನೇ ಸಾಲಿನ ನೇಮಕಾತಿ ಪ್ರಕ್ರಿಯೆಗೆ ಸಂಬಂಧವಾಗಿ ಪೂರ್ವ ತನಿಖಾ ಕಾರ್ಯವು ಜಾರಿಯಲ್ಲಿದೆ. ಜಿಲ್ಲಾ ಮಾರುಕಟ್ಟೆ ಅಧಿಕಾರಿ ಹುದ್ದೆಗೆ ನೇಮಕಾತಿ ಆದೇಶ ಹೊರಡಿಸಿದೆ.

ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಲ್ಲಿ ಕನ್ನಡ ಬಳಕೆ ಜಾರಿ

೨೬೬ (ಜಿಆ೧) ಶ್ರೀ ಬಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ).—ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಸರ್ಕಾರಿ ಸ್ವಾಮ್ಯದ ಉದ್ಯಮಿಗಳಲ್ಲಿ ದಿನನಿತ್ಯದ ಆಡಳಿತದಲ್ಲಿ ಕನ್ನಡ ಬಳಕೆಯಾಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಆ ಉದ್ಯಮಿಗಳಲ್ಲಿ ಕನ್ನಡ ಬಳಕೆಯ ಉಸ್ತುವಾರಿಗಳನ್ನು ನೋಡಿಕೊಳ್ಳಲು ಸರ್ಕಾರ ಒಂದು ವಿಶೇಷ ಸೆಲ್‌ನ್ನು ಸ್ಥಾಪಿಸುತ್ತದೆಯೇ ?

ಇ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆ ಬಗ್ಗೆ ಕೈಗೊಂಡಿರುವ ಕ್ರಮಗಳೇನು ?